## ‘ಪ್ರಭಾ’ ಅಂದರೆ...

ನಾನು ಕಾಲೇಜಿನಲ್ಲಿ ಓದುತ್ತಿದ್ದಾಗ ನಡೆದ ಘಟನೆ. ಚಾಮರಾಜನಗರದ ಜೆ.ಎಸ್.ಎಸ್. ಕಾಲೇಜಿನಲ್ಲಿ ನಾನು ವಿದ್ಯಾಭ್ಯಾಸ ಮಾಡುತ್ತಿದ್ದೆ. ಅದು ಪರೀಕ್ಷೆಯ ಸಮಯ, ನಮ್ಮ ಊರು ಅಮಚವಾಡಿಯಿಂದ ಚಾಮರಾಜನಗರಕ್ಕೆ ಐದು ಮೈಲಿ ಸೈಕಲ್ ತುಳಿಯಬೇಕಿತ್ತು. ಪರೀಕ್ಷೆ ಸಮಯವಾದ್ದರಿಂದ ನಾನು ನನ್ನ ಸ್ನೇಹಿತನ ಮನೆಯಲ್ಲಿದ್ದ ರೂಮಿನಲ್ಲೇ ಉಳಿದುಕೊಂಡಿದ್ದೆ.

ನಾವು ಸಂಜೆ ವೇಳೆ ಮಾತಾಡಲು ಕುಳಿತಾಗ ಒಂದು ಹೆಸರು ಪದೇ ಪದೇ ಕೇಳಿಬರುತಿತ್ತು. ನಮ್ಮ ‘ಪ್ರಭಾ’ ಹಾಗೇ ಹೀಗೇ ಎಂದು ನನ್ನ ಸ್ನೇಹಿತ ಪದೇ ಪದೇ ಹೇಳುತ್ತಿದ್ದ. ‘ಪ್ರಭಾ’ ಹೇಗಿರಬಹುದು ಎಂಬ ಕುತೂಹಲ ನನ್ನಲ್ಲಿ ಮನೆ ಮಾಡಿತ್ತು. ಇದ್ದಕ್ಕಿದ್ದಂತೆ ಒಂದು ದಿನ ನನ್ನ ಸ್ನೇಹಿತ, ‘ಮುಂದಿನ ವಾರ ಪ್ರಭಾ ಬರ್ತಾ ಇದೆ’ ಅಂತ ಹೇಳಿದ. ಅವರ ಮನೆಯಲ್ಲಿ ಅಣ್ಣ ತಮ್ಮ, ಅಕ್ಕ ತಂಗಿ ಇವರುಗಳಿಗೆ ಬರುತ್ತೆ... ಹೋಗತ್ತೆ... ಈ ರೀತಿ ಸಂಭೋದಿಸಿ ಮಾತನಾಡುವುದು ಅಭ್ಯಾಸ.

ಪ್ರಭಾ ಹೇಗಿರಬಹುದು ಎಂಬ ಬಗ್ಗೆ ನನ್ನಲ್ಲಿ ಕುತೂಹಲ ಇನ್ನೂ ಹೆಚ್ಚಾಯಿತು. ನಾನು ಕಾತರದಿಂದ ಕಾಯುತ್ತಿದ್ದೆ. ಒಂದು ವಾರ ಕಳೆಯಿತು. ಮನೆಗೆ ಯಾರ್ಯಾರೋ ಬಂದರು, ಆದರೆ ‘ಪ್ರಭಾ’ ಮಾತ್ರ ಕಣ್ಣಿಗೆ ಬೀಳಲಿಲ್ಲ. ನೇರವಾಗಿ ಕೇಳಲು ಸಂಕೋಚ. ಕಡೆಗೂ ಮಾತಿನ ಮಧ್ಯೆ ಹೇಳಿದೆ– ‘ಪ್ರಭಾ ಬರುತ್ತೇ ಅಂತ ಹೇಳಿದ್ದೆಯಲ್ಲಾ, ಎಲ್ಲಿ ಬರಲಿಲ್ಲವಲ್ಲಾ’. ಅವನು ಆಶ್ಚರ್ಯದಿಂದ ‘ಬಂದಿದೆಯಲ್ಲಾ’ ಅಂದ. ‘ಹೌದಾ’ ಅಂದೆ, ನಾನು ಗೊಂದಲದಿಂದ. ಅವನು ಮುಂದುವರೆಸಿದ ‘ಪ್ರಭಾ ಅಂದರೆ ಯಾರು ಅಂದುಕೊಂಡೆ, ದಿನಾ ನೀನು ಮಾತಾಡ್ತಿಯಲ್ಲ ಅವನೇ ನಮ್ಮ ಅಣ್ಣ... ಪ್ರಭಾಕರ’ ಅಂದ! ನನ್ನ ಮುಖ ಹರಳೆಣ್ಣೆ ಕುಡಿದವರ ರೀತಿ ಆಯ್ತು.

–ಅಮಚವಾಡಿ ಮಧುಸೂದನ

## ಭೋಜನಕ್ಕೆ ಮುಂಚೆ ಮಾತ್ರೆ; ಮೂರ್ಖತನಕ್ಕೆ ಪೆಚ್ಚಾದೆ

**ಕೊರೊನಾ** ಸೋಂಕಿನ ಆರ್ಭಟದಿಂದಾಗಿ ಎಲ್ಲದಕ್ಕೂ ಕಡಿವಾಣ ಹಾಕಲಾಗಿತ್ತು. ಅಂಥ ಸಮಯದಲ್ಲಿ ಈ ಮೊದಲೇ ನಿಶ್ಚಿತವಾಗಿದ್ದ ಮದುವೆಗೆ ಇಂತಿಷ್ಟು ಜನರೆಂದು ಪರವಾನಗಿ ಪಡೆದು ಕೆಲವರಷ್ಟೇ ಬಂಧುಗಳೊಂದಿಗೆ ಮದುವೆ ಮಾಡಬೇಕಾದ ಪರಿಸ್ಥಿತಿ. ನಮ್ಮ ಕುಟುಂಬದ ಮದುವೆಗೆಂದು ಬೆಂಗಳೂರಿಗೆ ಹೋದಾಗ ಆದ ಘಟನೆಯಿದು. ಕಲ್ಯಾಣ ಮಂಟಪಕ್ಕೆ ಹೋಗುತ್ತಿದ್ದಂತೆ ಸ್ಯಾನಿಟೈಸರ್ ಬಳಸಿದ ನಂತರವೇ ಪ್ರವೇಶಕ್ಕೆ ಅನುಮತಿ.

ಮದುವೆ ಮಂಟಪದಲ್ಲಿ ವಧುವರನ ಕಡೆಯವರು, ಪುರೋಹಿತರು ಮುಖಕ್ಕೆ ಮಾಸ್ಕ್ ಹಾಕಿಕೊಂಡು ಓಡಾಟ ಮಾಡುತ್ತ ವಿವಾಹ ಜರುಗಿತು. ಭೋಜನ ಸಮಯ ಸಮೀಪಿಸುತ್ತಿದ್ದಂತೆ ಬಾಳೆ ಎಲೆ ಊಟದ ವ್ಯವಸ್ಥೆ ಮಾಡಿದ್ದರು. ಊಟಕ್ಕೆ ಕುಳಿತಾಗ ಬಾಳೆ ಎಲೆ ಹರಡುತ್ತಿದ್ದಂತೆ ಮತ್ತೊಬ್ಬ ಬಾಳೆ ಎಲೆ ಮೇಲೆ ಮೊದಲು ಪುಟ್ಟ ಪ್ಲಾಸ್ಟಿಕ್ ಪ್ಲೇಟಲ್ಲಿ ಕ್ರೋಸಿನ್ ಟ್ಯಾಬ್ಲೆಟ್‌ನಂತಿದ್ದ ಬಿಳಿ ಬಣ್ಣದ್ದು ಹಾಕಿಹೋದ. ಅದನ್ನು ನೋಡುತ್ತಿದ್ದಂತೆ... ಕೊರೊನಾ ಹರಡದಂತೆ ಮಾಸ್ಕ್ ಹಾಕುವ ನಿಯಮದಂತೆ, ಮುಂಜಾಗ್ರತಾ ಕ್ರಮವಾಗಿ ಮದುವೆ ಮುಗಿದು ತೆರಳುವಾಗ ಸೋಂಕು ಹರಡಬಾರದೆಂದು ಊಟಕ್ಕೂ ಮೊದಲು ಬಾಳೆ ಎಲೆಯಲ್ಲಿ ಮಾತ್ರೆ ಬಡಿಸಿರಬಹುದೆಂದು ತಿಳಿದೆ.



ಹೊಸಪೇಟೆಯಿಂದ ಬೆಂಗಳೂರಿಗೆ ಪ್ರಯಾಣದಿಂದಾಗಿ, ಮೊದಲೇ ನಾನು ಸುಸ್ತಾಗಿದ್ದು ಜ್ವರ ಬರುವ ಲಕ್ಷಣ ನನ್ನಲ್ಲಿದ್ದರಿಂದ ಕೂಡಲೇ ಊಟದ ಎಲೆಯ ಪ್ಲೇಟಿನಲ್ಲಿದ್ದ ಮಾತ್ರೆಯನ್ನು ಬಾಯಿಗೆ ಹಾಕಲು ಮುಂದಾದೆ. ಅಷ್ಟರಲ್ಲಿ ಊಟಕ್ಕೆ ಕುಳಿತವರಿಗೆ ಕುಡಿಯಲು ನೀರಿನ ಬಾಟಲಿ ಕೊಡಲು ಬಂದವನು... ಟಿಶ್ಯೂ ಟ್ಯಾಬ್ಲೆಟ್ (tissue paper tablet) ನನ್ನ ಪ್ಲೇಟಲ್ಲಿ ಇಲ್ಲದ್ದನ್ನು ಗಮನಿಸಿ ಮತ್ತೊಂದು ತರಲು ಮುಂದಾದಾಗ...

ನಾನು ಬಾಯಿಗೆ ಹಾಕಿದ್ದು ಕ್ರೋಸಿನ್ ಟ್ಯಾಬ್ಲೆಟ್ ಅಲ್ಲ, ನಾನು ನೋಡರಿಯದ ಟಿಶ್ಯೂ ಟ್ಯಾಬ್ಲೆಟ್– ಬಾಳೆ ಎಲೆ ಸ್ವಚ್ಛ ಮಾಡುವ ಟಿಶ್ಯೂ ಎಂಬುದೂ, ನಾನು ಮೂರ್ಖಳಾದೆ ಎಂಬುದೂ ಅರ್ಥವಾಯಿತು.

–ಅನುರಾಧ ಟಿ., ಹೊಸಪೇಟೆ



## ಅಮ್ಮನಿಗೆ ಹೇಳದೇ ಉಳಿದ ಮಾತು

ಮೇ ತಿಂಗಳಲ್ಲಿ ‘ಅಮ್ಮಂದಿರ ದಿನ’ವನ್ನು ಆಚರಿಸುತ್ತೇವೆ, ಉಡುಗೊರೆ ಕೊಟ್ಟು, ಅವರೊಟ್ಟಿಗೆ ಸಮಯ ಕಳೆದು. ದೂರದಲ್ಲಿರುವ ಅಮ್ಮನಿಗೆ, ಅಗಲಿದ ಅಮ್ಮನಿಗೆ ಹೇಳದೇ ಉಳಿದಿರುವ ಮಾತುಗಳಿದ್ದರೆ ಅವುಗಳಿಗೆ ಅಕ್ಷರ ರೂಪ ಕೊಡಿ. ಆ ದಿನವನ್ನು ಅತಿ ಪ್ರೀತಿಯಿಂದ ನೆನಪಿಸಿಕೊಂಡಂತೆಯೇ ಅಮ್ಮನಿಗೆ ಪ್ರೀತಿ ಮತ್ತು ಗೌರವವನ್ನು ಸಲ್ಲಿಸಿ. ಜೊತೆಗಿದ್ದೂ ಕೆಲವೊಮ್ಮೆ ಹೇಳಲಾಗದ ಮಾತುಗಳು ಉಳಿದಿರುತ್ತವೆ. ಅವಕ್ಕೆ ಈ ವಿಭಾಗ ನಿಮಗೆ ವೇದಿಕೆ ಒದಗಿಸುತ್ತಿದೆ. ಬರಹ ನುಡಿ ಅಥವಾ ಯುನಿಕೋಡ್‌ನಲ್ಲಿ 150 ಪದಮಿತಿಯಲ್ಲಿರಲಿ. ಕೊನೆಯ ದಿನಾಂಕ ಮೇ 28. ಬರಹ ಕಳುಹಿಸಬೇಕಾದ ವಿಳಾಸ: editorsu@sudha.co.in